**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ: 536/2023**

ಪಿಡಬ್ಲೂ: 04

ಸಿಡಬ್ಲೂ:-05

ಹೆಸರು : ಜೆ ಎ ಅಮ್ಮಣ್ಣವರ

ವಯಸ್ಸು : 41 ವರ್ಷ

ಉದ್ಯೋಗ : ಮುಖ್ಯ ಪೇದೆ

ವಾಸ : ಸೈಬರ ಕ್ರೈಂ ಪೋಲೀಸ ಠಾಣೆ ಬೆಳಗಾವಿ

ದಿನಾಂಕ 19-06-2026 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಎ.ಪಿ.ಪಿ ಅವರಿಂದ.**

ನಾನು ದಿನಾಂಕ 12-11-2022 ರಂದು ನಾನು ಪೋಲೀಸ ಠಾಣೆಯಲ್ಲಿದ್ದಾಗ ಚಾಸಾ-01ರವರು ನನಗೆ ಹಾಗೂ ಚಾಸಾ-06 ರಿಂದ 09 ರವರಿಗೆ ಕರೆಯಿಸಿ ಖಾನಾಪುರ ಪೋಲೀಸ ಠಾಣಾ ವ್ಯಾಪ್ತಿಯ ರಾಮಗುರವಾಡಿ ಗ್ರಾಮ ಹದ್ದಿಯಲ್ಲಿ ಆರೋಪಿತರು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂಬ ಬಾತ್ಮಿ ಇದ್ದು, ಪಂಚನಾಮೆಗಾಗಿ ಸರ್ಕಾರಿ ಪಂಚರನ್ನು ಕರೆದುಕೊಂಡು ಬರಲು ನನಗೆ ಪತ್ರ ನೀಡಿ ಖಾನಾಪುರ ಪಟ್ಟಣ ಪಂಚಾಯಿತಿ ಮತ್ತು ತಹಶೀಲ ಕಚೇರಿಗೆ ಕಳುಹಿಸಿಕೊಟ್ಟುರು. ಅದೇರೀತಿ ತೂಕ ಮಾಡುವ ಯಂತ್ರ ಮತ್ತು ಪೋಟೋಗ್ರಾಪರನ್ನು ಸಹ ಕರೆದುಕೊಂಡು ಬರುವಂತೆ ಸೂಚಿಸಿದರು. ಅದರಂತೆ ನಾನು ಚಾಸಾ-02 ಮತ್ತು ಚಾಸಾ-03 ಚಾಸಾ-10, ಹಾಗೂ ಚಾಸಾ-11 ರವರನ್ನು ಮಧ್ಯಾಹ್ನ 3.45ಗಂಟೆಗೆ ಠಾಣೆಗೆ ಕರೆದುಕೊಂಡು ಬಂದೆ. ಆ ಸಮಯದಲ್ಲಿ ಪೋಲೀಸ ಠಾಣೆಗೆ ಚಾಸಾ-04ರವರು ಬಂದಿದ್ದರು. ಈ ಎಲ್ಲ ವಿಷಯಗಳನ್ನೂ ಚಾಸಾ-02, 03, 10 ಮತ್ತು 11 ರವರಿಗೆ ತಿಳಿಸಿ, ನಮ್ಮ ಕಚೇರಿಯ ಸರ್ಕಾರಿ ವಾಹನ ಕೆ 22 ಜಿ 1112 ನೇದ್ದರಲ್ಲಿ ಚಾಸಾ-02, 03, 10 ಮತ್ತು 11 ಹಾಗೂ ಚಾಸಾ-06ರವರನ್ನು ತನಿಖಾ ಸಾಮಗ್ರಿಗಳೊಂದಿಗೆ ಚಾಸಾ-01ರವರು ಒಂದು ವಾಹನದಲ್ಲಿ ಹಾಗೂ ನಾನು ಚಾಸಾ-04, 07, 08, 09 ಎಲ್ಲರೂ ಸೇರಿ ಒಂದು ವಾಹನದಲ್ಲಿ 4 ಗಂಟೆಗೆ ಪೋಲಿಸ ಠಾಣೆ ಬಿಟ್ಟು 4.15 ಗಂಟೆಗೆ ಘಟನಾ ಸ್ಥಳಕ್ಕೆ

ಹೋದೆವು. 4.20 ಗಂಟೆಗೆ ಘಟನಾ ಸ್ಥಳದಲ್ಲಿ ಯಾರೋ ಇಬ್ಬರು ಗಾಂಜಾ ಮಾರಾಟ ಮಾಡುತ್ತಾ ನಿಂತಿದ್ದರು. ಅವರಿಬ್ಬರನ್ನು ನಾವು ಸುತ್ತುವರೆದೆವು. ಅವರಲ್ಲಿ ಒಬ್ಬನ ಕೈಯಲ್ಲಿ ನೀಲಿ ಬಣ್ಣದ ಪ್ಲಾಸ್ಟಿಕ ಕ್ಯಾರಿ ಬ್ಯಾಗ ಇತ್ತು. ಚಾಸಾ-01 ರವರು ಆರೋಪಿಗಳ ಹೆಸರು ಕೇಳಲಾಗಿ ಒಬ್ಬನ ಹೆಸರು ಅಲಿ ಹೈದರ ಮೇಬರಶಾ ಅಂತ ಮತ್ತೊಬ್ಬನ ಹೆಸರು ನಾರಾಯಣ ಅಮೃತ ಪಾಟೀಲ ಇಬ್ಬರೂ ಸಾ.ದುರ್ಗಾ ನಗರ, ಖಾನಾಪುರ ಅಂತ ತಿಳಿಸಿದರು. ಚಾಸಾ-01ರವರು ಆರೋಪಿಗಳಿಗೆ ಅಲ್ಲೇ ಹಾಜರಿದ್ದ ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ಅಂಗ ಶೋಧನೆ ಮಾಡಬೇಕೋ ಅಥವಾ ನ್ಯಾಯಾಧೀಶರ ಸಮಕ್ಷಮ ಅಂಗ ಶೋಧನೆ ಮಾಡಬೇಕೋ ಅಥವಾ ನೋಟೀಸು ನೀಡಿ ನಿಮ್ಮ ಅಂಗ ಶೋಧನೆ ಮಾಡಬೇಕೋ ಅಂತ ಕೇಳಿದಾಗ ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ತಮ್ಮ ಅಂಗ ಶೋಧನೆ ಮಾಡಲು ತಿಳಿಸಿದಂತೆ ಚಾಸಾ-01ರವರ ಸೂಚನೆ ಮೇರೆಗೆ ಮೊದಲು ನಮ್ಮ ನಮ್ಮ ಅಂಗ ಶೋಧನೆ ಮಾಡಿಕೊಳ್ಳಲಾಯಿತು. ನಮ್ಮಲ್ಲಿ ಏನೂ ಇಲ್ಲ ಅಂತ ಖಚಿತವಾದ ನಂತರ ಆರೋಪಿಗಳ ಅಂಗ ಶೋಧನೆ ಮಾಡಲಾಯಿತು. ಅಂಗ ಶೊಧನೆ ಮಾಡಲಾಗಿ 2ನೇ ಆರೋಪಿ ಹತ್ತಿರ 182 ಗ್ರಾಂ ನಷ್ಟು ಗಾಂಜಾ ಸಿಕ್ತು. ಅದೇರೀತಿ 1ನೇ ಆರೋಪಿ ಹತ್ತಿರ 297 ಗ್ರಾಂ ಗಾಂಜಾ ಸಿಕ್ತು. ಮತ್ತು ಆರೋಪಿತರು ಗಾಂಜಾ ಮಾರಾಟ ಮಾಡಲು ಉಪಯೋಗಿಸುತ್ತಿದ್ದ ಕೆಎ 22 ಎಂಸಿ 6626 ಸಂಖ್ಯೆಯ ಕಾರಗಾಡಿ ಇತ್ತು, 1ನೇ ಆರೋಪಿ ಹತ್ತಿರ 600/- ರೂಪಾಯಿ ನಗದು ಇತ್ತು. ಸದರಿ ನಗದು ಗಾಂಜಾ ಮಾರಾಟದಿಂದ ಬಂದ ಹಣ ಅಂತ 1ನೇ ಆರೋಪಿ ತಿಳಿಸಿದ. ನಂತರ ಚಾಸಾ-07ರ ಮೂಲಕ ಸ್ಥಳದಲ್ಲೇ ಪಿರ್ಯಾದಿ ತಯಾರಿಸಿ ಖಾನಾಪುರ ಪೋಲಿಸ ಠಾಣೆಗೆ ಹೋಗಿ ದೂರು ಸಲ್ಲಿಸುವಂತೆ ನನ್ನನ್ನು ಕಳುಹಿಸಿಕೊಡಲಾಯಿತ. ಅದರಂತೆ ನಾನು ಪೋಲೀಸ ಠಾಣೆಗೆ ಬಂದು ದೂರು ಕೊಟ್ಟೆ. ಸದರಿ ದೂರಿನ ಅನ್ವಯ ಖಾನಾಪುರ ಪೋಲೀಸ ಠಾಣೆಯ ಗುನ್ಹಾ ಸಂ.215/2022 ಅಂತಾ ದಾಖಲಿಸಲಾಯಿತು. ನಂತರ ಸಾಯಂಕಾಲ 05.40 ಗಂಟೆಗೆ ಸದರಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ತೆಗೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ಅಲ್ಲಿ 05.40 ಗಂಟೆಯಿಂದ 6.30 ಗಂಟೆಯ ವರೆಗೆ ಪಂಚನಾಮೆಯನ್ನು ಮಾಡಿ ನಮ್ಮ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ಗಾಂಜಾದ ಮಾದರಿಯನ್ನು ತೆಗೆದು ಪಂಚರ ಸಮಕ್ಷಮ ಪ್ಯಾಕ ಮಾಡಲಾಯಿತು. ಸಾಕ್ಷಿಯು ಪಂಚನಾಮೆಯಲ್ಲಿಯ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು

**ನಿಪಿ-1(ಎಚ)** ಅಂತ ಗುರುತಿಸಲಾಯಿತು. ಸಾಕ್ಷಿ **ನಿಪಿ-2, 4, 5 ರಿಂದ 7**ರಲ್ಲಿ ತಾವಿರುವುದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು, ಜಪ್ತ ಪಡಿಸಿಕೊಂಡ ಎರಡು ಪ್ಯಾಕೆಟಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೆ **ಮು ಮಾ -01, 02** ಅಂತಾ ಗುರುತಿಸಲಾಗಿದೆ. ನಾನು ಈ ಬಗ್ಗೆ ನನ್ನ ಹೇಳಿಕೆಯನ್ನು ದಾಖಲಿಸಿದ್ದೇನೆ.

**ವಾಟೀ ಸವಾಲುಃ ಶ್ರೀಮತಿ ಆರ ಎಂ ಎಚ ವಕೀಲರ ಪರವಾಗಿ ಶ್ರೀ ಬಿ ಎಂ ಚ ವಕೀಲರು ಹಾಜರಿದ್ದು ವಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.